## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆ: 620/14

**ಸಾಕ್ಷಿಯನ್ನು ದಿಃ 18.10.2022 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

**ಪಾಟೀಸವಾಲುಃ ಆರೋಪಿ ಪರ ವಕೀಲರಾದ ಶ್ರೀ  ಅವರಿಂದ –**

ನಾನು 2010 ರಿಂದ 2014 ರವರೆಗೆ ಆರೋಪಿ ಕರ್ನಾಟಕ ಬ್ಯಾಂಕ್ ಹುಣಸೂರು ಶಾಖೆಯಲ್ಲಿ ಮ್ಯಾನೇಜರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ಆ ಸಮಯದಲ್ಲಿ ನಾನು ಕೆಳ ಅಧಿಕಾರಿ ಆಗಿ ಕೆಲಸ ಮಾಡಿರುತ್ತೇನೆ. ಆರೋಪಿಯ ನೇರ ಕೆಳ ಅಧಿಕಾರಿ ಅಮೃತ್ ಎಂಬುವವರು ಇದ್ದರು. ನಾವು ಆರ್ ಬಿ ಐ ಗೈಡ್ ಲೈನ್ಸ್ ಪ್ರಕಾರ ಕೆಲಸ ಮಾಡುತ್ತೇವೆ. ಆಫಿಸರ್ ಎಂದರೆ ಚೆಕ್ ಪಾಸ್ ಮಾಡುವುದು, ಹಣ ಕೊಡುವುದು ಹಾಗೂ ಚೆಕ್ ವೆರಿಫಿಕೇಷನ್ ಮಾಡುವುದು ಆಗಿರುತ್ತದೆ.

ನಮ್ಮ ಪ್ರತಿನಿತ್ಯದ ಕೆಲಸದಲ್ಲಿ ಮ್ಯಾನೇಜರ್ ಅವರ ಯಾವುದೇ ಹಸ್ತಕ್ಷೇಪ ಇರುವುದಿಲ್ಲ ಎಂದರೆ ಎಕ್ಸ್ ಪೆಂಡಿಚರ್ ಗೆ ಮಾತ್ರ ಮ್ಯಾನೇಜರ್ ಅವರ ಸಹಿ ಬೇಕು ಬೇರೆ ವ್ಯವಹಾರಕ್ಕೆ ಬೇಕಾಗಿರುವುದಿಲ್ಲ ಸದರಿ ದಿನಾಂಕದಂದು ಡಿ ವೈ ಉಪ್ಪಾರ್ ಅವರ 25 ಲಕ್ಷ ಹಣದ ಟ್ರಾನ್ಸ್ ಕ್ಷನ್ ನಾನೇ ಮಾಡಿರುತ್ತೇನೆ ಎಂದರೆ ಸರಿ. ಅನ್ನು ಶ್ರದ್ದಾ ಎಂಟರ್ ಪ್ರೈಸಸ್ ನವರಿಗೆ ಆರ್ ಟಿ ಜಿ ಎಸ್ ಮಾಡಲು ಆರೋಪಿ ಅವರು ಆರ್ ಟಿ ಜಿ ಎಸ್ ಚಲನ್ ಬರೆದುಕುಟಪ್ಪಿದ್ದರು, ಅದರ ಜೊತೆ ಡೆಬಿಟ್ ಸ್ಲಿಪ್ ಕೊಟ್ಟಿದ್ದರು. ಆರ್ ಟಿ ಜಿ ಎಸ್ ಜೊತೆ ಚೆಕ್ ಪಡೆದುಕೊಂಡೆ ಆರ್ ಟಿ ಜಿ ಎಸ್ ಮಾಡಬೇಕು ಎಂದರೆ ಸರಿ.

ಈ ವ್ಯವಹಾರವನ್ನು ಅಕೌಂಟ್ ಓಲ್ಡರ್ ಅವರ ನಿರ್ದೇಶನ ಇಲ್ಲದೆ ನಾವು ಮಾಡಲು ಬರುವುದಿಲ್ಲ ಎಂದರೆ ಸರಿ. ಆ ದಿನ ಡಿ ವೈ ಉಪ್ಪಾರ್ ಅವರಿಂದ ನನಗೆ ಯಾವುದೇ ಲೆಟರ್ ಅಥವಾ ಚೆಕ್ ಬಂದಿರುವುದಿಲ್ಲ. ಆರ್ ಟಿ ಜಿ ಎಸ್ ಮಾಡಬೇಕಾದರೆ ಚೆಕ್ ನಂಬರ್ ಅನ್ನು ಕಂಪ್ಯೂಟರ್ ನಲ್ಲಿ ಮೆನ್ ಷನ್ ಮಾಡಿದರೆ ಮಾತ್ರ ಆರ್ ಟಿ ಜಿ ಎಸ್ ಆಗುತ್ತದೆ ಎಂದರೆ ಸರಿ. ಅಕೌಂಟ್ ಓಲ್ಡರ್ ನಿಂದ ಯಾವುದೇ ನಿರ್ದೇಶನ ಬಂದಿರುವುದಿಲ್ಲ ಸದರಿ ನಿರ್ದೇಶನ ಆರೋಪಿ ಅವರಿಗೆ ಬಂದಿದ್ದು ಅವರು ನನಗೆ ತಿಳಿಸಿದರು.

ಆ ದಿನ ಆರೋಪಿಗೆ ಯಾವುದೇ ಲಿಖಿತ ರೂಪದಲ್ಲಿ ನಿರ್ದೇಶನ ಅಕೌಂಟ್ ಓಲ್ಡರ್ ನಿಂದ ಬಂದಿರುವುದಿಲ್ಲ. ನನಗೂ ಕೂಡ ಆರೋಪಿ ಮೌಖಿಕ ನಿರ್ದೇಶನ ನೀಡಿದ್ದರು. ಸಾಮಾನ್ಯವಾಗಿ ಮ್ಯಾನೇಜರ್ ಅವರು ನಮಗೆ ಚೆಕ್ ಪಾಸ್ ಮಾಡಲು ಹೇಳಿದಾಗ ನಾವು ನಮ್ಮ ಮೇಲಾಧಿಕಾರಿಗಳಿಗೆ ತಿಳಿಸಬೇಕು ಎಂದರೆ ಮ್ಯಾನೇಜರ್ ಅವರೆ ನಮ್ಮ ಮೇಲಾಧಿಕಾರಿಗಳು ಎಂದು ಸಾಕ್ಷಿ ನುಡಿಯುತ್ತಾರೆ.

ಸಾಮಾನ್ಯವಾಗಿ ಮ್ಯಾನೇಜರ್ ಅವರೆ ತಪ್ಪು ಮಾಡಿದರೆ ನಾವು ನಮ್ಮ ಹೆಡ್ ಆಫೀಸ್ ಗೆ ತಿಳಿಸುತ್ತೇಲವ. ಆರೋಪಿ ಆ ದಿನ ತಪ್ಪು ಮಾಡಿರುತ್ತಾರೋ ಇಲ್ಲವೋ ನನಗೆ ಗೊತ್ತಾಗಿರುವುದಿಲ್ಲ. ಆ ದಿನ ನನಗೆ ಡಿ ವೈ ಉಪ್ಪಾರ್ ಅವರು ಹಣ ವರ್ಗಾವಣೆ ಮಾಡಲು ನನಗೆ ಯಾವುದೇ ನಿರ್ದೇಶನ ನೀಡಿಲ್ಲ, ಆರೋಪಿ ನನಗೆ ಮೌಖಿಕ ನಿರ್ದೇಶನ ನೀಡಿಲ್ಲ ಎಂದರೆ ಸರಿಯಲ್ಲ. ನಾನು ಉದ್ದೇಶಪೂರ್ವಕ ಸದರಿ ಹಣ ವರ್ಗಾವಣೆ ಮಾಡಿ ಅದನ್ನು ಹೆಡ್ ಆಫೀಸ್ಗೆ ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ.

ಆರೋಪಿ ರಾಜಮ್ಮ ಅವರ 57,250/- ದುರುಪಯೋಗ ಪಡಿಸಿಕೊಂಡಿರುತ್ತಾರೆ. ಸದರಿ ಟ್ರಾನ್ಸಾಕ್ಷನ್ ನಲ್ಲಿ ಆರೋಪಿಯ ಸಹಿ ಇರುತ್ತದೆ. ರಾಜಮ್ಮ ಅವರ ವ್ಯವಹಾರ ಮಾಡಿರುವ ಸಮಯ ನಾನು ಉಪಸ್ಥಿತನಿದ್ದೆ ಆದರೆ ನಾನು ವ್ಯವಹಾರ ಮಾಡಿರುದಿಲ್ಲ, ಅಮೃತ್ ಎಂಬುವವರು ಮಾಡಿರುತ್ತಾರೆ ಈ ಬಗ್ಗೆ ನನಗೆ ಖುದ್ದು ಮಾಹಿತಿ ಇಲ್ಲ ಎಂದರೆ ಸರಿ.

ವರದರಾಜು ಅವರಿಗೆ ಸಂಬಂಧಪಟ್ಟಂತೆ ಆಗಿರುವ ವ್ಯವಹಾರದ ಬಗ್ಗೆ ನನಗೆ ಖುದ್ದು ಮಾಹಿತಿ ಇಲ್ಲ ಎಂದರೆ ಸರಿ. ಕಾಳೇಗೌಡ ಅವರಿಗೆ ಸಂಬಂಧಪಟ್ಟಂತೆ ಆಗಿರುವ ವ್ಯವಹಾರದ ಬಗ್ಗೆ ನನಗೆ ಖುದ್ದು ಮಾಹಿತಿ ಇಲ್ಲ ಎಂದರೆ ಸರಿ. ನಮ್ಮ ಬ್ಯಾಂಕಿನಲ್ಲಿ ಹಣ ವಿತ್ ಡ್ರಾ ಮಾಡಬೇಕಾದರೆ ವಿತ್ ಡ್ರಾವಲ್ ಫಾರಂ ಅನ್ನು ಸಂಬಂಧಪಟ್ಟವರೆ ಸಹಿ ಮಾಡಿ ಪಡೆಯಬೇಕು ಎಂದರೆ ಸರಿ.

ನಿಪಿ.90 ರಲ್ಲಿ ಇರುವ ಸಹಿಗಳನ್ನು ನನ್ನ ಸಮಕ್ಷಮ ಪಡೆದಿರುತ್ತಾರೆ. ರಾಜಮ್ಮ ಅವರ ಗಂಡನ ಹೆಸರು ಜಗನ್ನಾಥ. ರಾಜಮ್ಮ ಅವರ ಮುಂಚಿನ ವ್ಯವಹಾರಗಳನ್ನು ಬ್ಯಾಂಕಿನಲ್ಲಿ ನಾನು ಮಾಡಿರುವುದಿಲ್ಲ. ರಾಜಮ್ಮ ಅವರು ನನಗೆ ಪರಿಚಯ ಇದ್ದರು. ಅವರು ಬ್ಯಾಂಕಿಗೆ ಬಂದು ಹೋಗಿ ಮಾಡುತ್ತಿದ್ದರು. ನಿಪಿ.90 ರಲ್ಲಿ ಇರುವ ಸಹಿಗಳು ರಾಜಮ್ಮ ಅವರ ಸಹಿಗಳಲ್ಲ ಎಂದರೆ ಸರಿಯಲ್ಲ.

ನಾನು ಹಾಗೂ ಸುಧಾಕರ್ ಅವರು ಸೇರಿಕೊಂಡು ಬ್ಯಾಂಕಿನಲ್ಲಿ ಅವ್ಯವಹಾರ ಮಾಡಿದ್ದು, ಅದನ್ನು ಮುಚ್ಚಿಹಾಕಲು ಆರೋಪಿ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬ್ಯಾಂಕಿನ ಎಲ್ಲಾ ವ್ಯವಹಾರಗಳನ್ನು ಮಾಡಿದ್ದು ಎಲ್ಲಾ ತಪ್ಪು ನಮ್ಮದೇ ಆಗಿರುತ್ತದೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಶಿರಿನ್ ಜಾವೀದ್ ಅನ್ಸಾರಿ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.